

ಮುಂಗಡೆಯೊಳ್ ಸಾಲಾಗಿ ಅಂಗಡಿಗಳಿರುತಿಹವು
ಹಂಗಿಗನು ನೀನಾಗಬೇಡ ಅವರ॥
ಸಂಗಗೈಯುತ ವ್ಯಾಪಾರಂಗಳನು ಮಾಡಿದರೆ
ಭಂಗಿಯನು ಕೊಟ್ಟು ಬಲು ಭಂಗಪಡಿಸುವರಯ್ಯ॥

ಎಂದು ಅಂಗಡಿ ನಣ್ಣರು ಹಾಡುತ್ತಿದ್ದರು, ನಾನು ಒಂದು ಸಿಗರೇಟು ಕೊಳ್ಳಲು ತಲೆತಗ್ಗಿಸಿ ಅವರ ತಗಡುಶೀಟಿನ ಜನೋಪಯೋಗೀ ಸಾಮಗ್ರಿಗಳ ಜೋಪಡಿ ಮಳಿಗೆಯೊಳಗೆ ನುಸುಳಿದಾಗ—

"ಓಹೋ ಮಾಷ್ಟ್ರು, ಬನ್ನಿರಯ್ಯ!" ಎಂದರವರು ರಾಗವಾಗಿ, ಯಕ್ಷಗಾನದ ಶೈಲಿಯಲ್ಲಿ. ಇದು ಹಾಸ್ಯಪ್ರಜ್ಞೆಯೇ, ಹುಚ್ಚೇ, ಸೋಗೇ ಎನ್ನುವುದು ನನಗೆ ಯಾವತ್ತೂ ಅರ್ಥವಾಗಿರಲಿಲ್ಲ. ಈ ಮುದುಕ ಯಾವಾಗಲೂ ನನಗೊಂದು ಒಗಟು. ಆದರೆ ಸಿಗರೇಟಿಗೆ ಅವರದೇ ಅಂಗಡಿಯ ಕಡ್ಡಿಗೀರಿ ಪ್ರಜ್ವಲಿಸಿಕೊಂಡು ಅಂಗಡಿಯಿಂದ ಹೊರಗೆ ಕಾಲಿಟ್ಟಕೂಡಲೇ ಈ ಒಗಟು ಮರೆತುಹೋಗುತ್ತಿತ್ತು.

ನಣ್ಣರ ಲಹರಿಗಿಂತಲೂ ಆಶ್ಚರ್ಯಕರವಾಗಿ ಕಂಡದ್ದು ಅಲ್ಲಿದ್ದ ಇತರ ಇಬ್ಬರು ಗಿರಾಕಿಗಳು ಮತ್ತು ನಣ್ಣರ ಹಿಂಭಾಗದಲ್ಲಿ ಕುರ್ಚಿಯೊಂದರಲ್ಲಿ ಭಾವರಹಿತ ಮುಖದಿಂದ ಕುಳಿತು ಜಗತ್ತನ್ನೆಲ್ಲ ಶೂನ್ಯವೆಂಬಂತೆ ದಿಟ್ಟಿಸುತ್ತಿದ್ದ ಅವರ ಹೆಂಡತಿಯ ಮೇಲೆ ಇದರಿಂದ ಎಳ್ಳಷ್ಟೂ ಪ್ರಭಾವವಾಗದೆ ಬೋರ್ಕಲ್ಲ ಮೇಲೆ ನೀರು ಸುರಿದಂತಾಗುತ್ತಿದ್ದ ಪರಿಸ್ಥಿತಿ. ಗಿರಾಕಿಗಳು ಮಾತಾಡದೆ ಸಿಟ್ಟಿನಿಂದ ಎಂಬಂತೆ ನಿಂತುಕೊಂಡು ಒಮ್ಮೆ ನಣ್ಣರನ್ನು, ಅದೇ